
# ಮಹಾಬಲಿಪುರಂ ಬಯಲು ಚಿತ್ರಶಾಲೆ



**ತಮಿಳುನಾಡಿನ ಮಹಾಬಲಿಪುರಂ ದೇಶದ ಹೆಮ್ಮೆಯ ವಾಸ್ತುಶಿಲ್ಪಗಳಲ್ಲೊಂದು. ಅದ್ಭುತ ಶಿಲ್ಪಗಳ ಕುಸುರಿ ಕೆತ್ತನೆಯಿಂದ ಗಮನಸೆಳೆಯುವ ಈ ಪ್ರವಾಸಿ ಕ್ಷೇತ್ರಕ್ಕೆ ಸಮುದ್ರದ ಆಕರ್ಷಣೆಯೂ ಇದೆ. ನಡೆದು ನೋಡಬೇಕಾದ, ನೋಡಿ ಅನುಭವಿಸಬೇಕಾದ ಈ ಸ್ಥಳ ಭಾರತೀಯ ಇತಿಹಾಸದ ಗತವೈಭವಗಳಲ್ಲೊಂದು.**

**■ ಗೀತಾ ಕುಂದಾಪುರ**

ತಮಿಳರಿಗೆ ಮಾಮಲಾಪುರಂ, ಉಳಿದವರಿಗಿದು ಮಹಾಬಲಿಪುರಂ. ಎರಡರ ಅರ್ಥವೂ ಬೇರೆ ಬೇರೆ. ಮಾಮಲಾ ಎಂದರೆ ಕುಸ್ತಿಪಟು. ಇಲ್ಲಿನ ಪಲ್ಲವ ರಾಜ ನರಸಿಂಹ ವರ್ಮ ಸ್ವತಃ ಕುಸ್ತಿಪಟುವಾಗಿದ್ದು ಇತರ ಕುಸ್ತಿಪಟುಗಳಿಗೂ ಆಶ್ರಯದಾತನಾಗಿದ್ದನಂತೆ, ಇದರಿಂದಾಗಿ ಮಾಮಲಾಪುರಂ ಎಂಬ ಹೆಸರು. ವಿಷ್ಣುವಿನ ಅವತಾರಗಳಲ್ಲೊಂದಾದ ವಾಮನ ಹುಟ್ಟಿದ್ದು ಮಹಾಬಲಿ ಎಂಬ ರಾಜನ ಅಹಂಕಾರ ಮುರಿಯಲ., ಆ ಮಹಾಬಲಿಯಿಂದಾಗಿಯೇ ಇಲ್ಲಿಗೆ ಮಹಾಬಲಿಪುರಂ ಹೆಸರು ಬಂತಂತೆ.

ಮಹಾಬಲಿಪುರಂ ಭಾರತದ ಪೂರ್ವ ತೀರಕ್ಕೆ ಬಂಗಾಳ ಕೊಲ್ಲಿಯ ಕೊರಮಂಡಲ ಕಿನಾರೆಯಲ್ಲಿದೆ. 7ನೇ ಮತ್ತು 8ನೇ ಶತಮಾನ 'ಪಲ್ಲವ' ರಾಜವಂಶದವರ ಸುವರ್ಣ ಕಾಲ. ರಾಜ ನರಸಿಂಹ ವರ್ಮ 1 ಮತ್ತು ನರಸಿಂಹ ವರ್ಮ 11 (ರಾಜಸಿಂಹ) ಅವರುಗಳು ಶಕ್ತಿಯುತರಾಗಿದ್ದದ್ದು ಮಾತ್ರವಲ್ಲ – ಕವಿಗಳಿಗೆ, ಶಿಲ್ಪಿಗಳಿಗೆ, ಪಂಡಿತರಿಗೆ ಆಶ್ರಯದಾತರಾಗಿದ್ದರು. ಕಲೆ–ವಾಸ್ತುಶಿಲ್ಪದಲ್ಲಿ ಹೊಸತನವನ್ನು ಪ್ರೋತ್ಸಾಹಿಸಿದರು. ಇದಕ್ಕೆ ನಿದರ್ಶನ ಮಹಾಬಲಿಪುರಂನಲ್ಲಿರುವ ಮಂದಿರಗಳು ಮತ್ತು ಸ್ಮಾರಕಗಳು.

ಮಹಾಬಲಿಪುರಂನ ಪ್ರಕೃತಿ ಸೌಂದರ್ಯ ಮತ್ತು ಇತರ ಸಂಪತ್ತುಗಳನ್ನು ಉಪಯೋಗಿಸಿಕೊಂಡು ಮಾಡಿದ ವರ್ಣಚಿತ್ರಗಳಲ್ಲಿ, ವಾಸ್ತುಶಿಲ್ಪಗಳಲ್ಲಿ ಹೊಸತನ ಮತ್ತು ಶ್ರೀಮಂತಿಕೆಯನ್ನು ನೋಡಬಹುದು. ಆದರೂ ನಮಗೆ ನೋಡಲು ಆಗದೆ ಅಳಿದು ಹೋದವೂ ಸಾಕಷ್ಟಿವೆ. ಯುರೋಪಿನ ನಾವಿಕರು ಇಲ್ಲಿ '7 ಪಗೋಡಗಳು' ಅಂದರೆ 7 ಶಿಖರವಿರುವ ಮಂದಿರಗಳನ್ನು ನೋಡಿ ಇಲ್ಲಿಗೆ ಬಂದರಂತೆ. ಆದರೀಗ ಹೆಚ್ಚಿನವು ನಾಶವಾಗಿದೆ. ಇಷ್ಟೆಲ್ಲ ಇದ್ದರೂ 18ನೇ ಶತಮಾನದ ಅಂತ್ಯಭಾಗದವರೆಗೂ ಈ ಪ್ರದೇಶ ಗುಪ್ತವಾಗಿತ್ತಂತೆ. ಈಗ ಮಹಾಬಲಿಪುರಂಗೆ ಬರುವ ಪ್ರವಾಸಿಗರಿಗೆ ವಿಶಾಲವಾದ ಕಡಲು ತೀರ, ಕಣ್ಣು ಹಾಯಿಸಿದಲ್ಲೆಲ್ಲ ಕಾಣುವ ತೆಂಗು, ಗಾಳಿಮರ ಸ್ವಾಗತಿಸುತ್ತವೆ. ಇಲ್ಲಿರುವ ಮಂದಿರಗಳು ಮತ್ತು ಸ್ಮಾರಕಗಳು ಕಣ್ಣಿಗೆ ರಸದೌತಣ ನೀಡುತ್ತವೆ.

ಚೆನ್ನೈನಿಂದ ಮಹಾಬಲಿಪುರಂಗೆ ಹೋಗುವ 'ಈಸ್ಟ್ ಕೋಸ್ಟ್ ರೋಡ್' ಉತ್ತಮವಾಗಿದ್ದು, ಉದ್ದಕ್ಕೂ ರೆಸಾರ್ಟುಗಳು ತಲೆ ಎತ್ತಿವೆ. ಮಹಾಬಲಿಪುರಂನ ಪೇಟೆಯ ಸುತ್ತಮುತ್ತಲೂ ಹೋಟೆಲುಗಳಿವೆ.

## ರಥ ಮಂದಿರಗಳು

ಪಾಂಡವ ರಥವೆಂದೇ ಪ್ರಸಿದ್ಧಿ ಪಡೆದಿರುವ ಇವುಗಳು ರಥಗಳೂ ಅಲ್ಲ, ಪಾಂಡವರಿಗಾಗಿಯೋ ಪಾಂಡವರಿಂದಲೋ ನಿರ್ಮಾಣವಾದವುಗಳೂ ಅಲ್ಲ. ಇವುಗಳು ಶಿವ, ವಿಷ್ಣು, ಅಯ್ಯಪ್ಪ, ಕಾರ್ತಿಕೇಯ ಮತ್ತು ದುರ್ಗಾ ದೇವಿಯ ರಥದ ಆಕಾರದಲ್ಲಿರುವ ಮಂದಿರಗಳು. ಮಂದಿರಗಳು ರಥದ ಆಕಾರದಲ್ಲಿರುವುದರಿಂದ ಮತ್ತು ಸಂಖ್ಯೆಯಲ್ಲಿ ಐದು ಮಂದಿರಗಳು ಇರುವುದರಿಂದ ಮಂದಿರಗಳಿಗೆ ಪಾಂಡವ ರಥವೆಂದು ಹೆಸರು ಬಂದಿರಬೇಕು.

ಈ ಏಕ ಶಿಲೆಯ ಮಂದಿರಗಳನ್ನು ಬೂದು ಬಣ್ಣದ ಗ್ರಾನೈಟ್ ಕಲ್ಲುಗಳಿಂದ ಕೆತ್ತಿದ್ದಾರೆ. ಒಂದು ಮಂದಿರ ಮತ್ತೊಂದು ಮಂದಿರಕ್ಕಿಂತ ಎರಡು–ಮೂರು ಅಡಿ ಅಂತರದಲ್ಲಿದೆ. ಯಾವುದಕ್ಕೂ ಕಿಟಕಿ, ಬಾಗಿಲುಗಳಿಲ್ಲ, ಕಂಬಗಳಿವೆ ಮತ್ತು ಮಂದಿರದೊಳಗೆ ಮೂರ್ತಿಗಳೂ ಇಲ್ಲ. ಮಂದಿರಗಳ ಗೋಡೆ ಮತ್ತು ಕಂಬಗಳ ಮೇಲೆ ಕೆತ್ತನೆಗಳಿವೆ. ಧರ್ಮರಾಯನ ರಥವೆಂದು ಕರೆಯುವ ಮಂದಿರದ ಕೆತ್ತನೆಯ ಕೆಲಸ ಸುಂದರವಾಗಿದೆ. ಭೀಮ ರಥವೆಂದು ಕರೆಯುವ ಮಂದಿರವು ಎಲ್ಲದಕ್ಕಿಂತ ದೊಡ್ಡದಾಗಿದ್ದು, ಮಾಳಿಗೆಯೂ ಇದೆ. ಅರ್ಜುನ ರಥವೆಂದು ಕರೆಯುವ ಮಂದಿರದ ಗೋಡೆಗಳ ಮೇಲೆ ಕೆತ್ತಿದ ಮೂರ್ತಿಗಳು ಆಕರ್ಷಕವಾಗಿವೆ.

ದ್ರೌಪದಿ ರಥವು ಎಲ್ಲದಕ್ಕಿಂತ ಚಿಕ್ಕದಾಗಿದ್ದು, ಶಿಖರವು ಗುಂಡಗಿದ್ದು ಗುಡಿಸಿಲಿನ ಆಕಾರದಲ್ಲಿದೆ. ನಕುಲಸಹದೇವನ ರಥವೂ ಪೂರ್ಣಗೊಂಡಿಲ್ಲ. ಮಂದಿರದ ಒಂದು ಭಾಗದಲ್ಲಿ ದೊಡ್ಡ ನಂದಿಯಿದೆ. ಒಟ್ಟಿಗೆ ಸವಾರಿಗೆ ಹೊರಟ ರಥಗಳಂತೆ ಕಾಣುವ ಈ ಐದು ಮಂದಿರಗಳನ್ನು ನೋಡುವಾಗ ಸುಂದರ ದೃಶ್ಯ ಕಾವ್ಯದ ಅನುಭವವಾಗುತ್ತದೆ.

## ಈಶ್ವರ ಮಂದಿರ

ದೊಡ್ಡ ಬಂಡೆಯ ಮೇಲೆ ಕಟ್ಟಿದ ಮಂದಿರವಿದು. ಹತ್ತಲು ಮೆಟ್ಟಿಲುಗಳಿವೆ. ಮಂದಿರದ ಹೊರಗಿನ ಆವರಣಕ್ಕೆ ಮಾತ್ರ ಪ್ರವೇಶವಿದೆ. ಮಂದಿರದ



